ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/98/2014-15 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| ಶ್ರೀ.1)ಮದುಗವ್ವ ತಂದೆ ಲೇಟ್ ಚಾರೆಪ್ಪ ಬಾವಿ<br>2)ಬಸಪ್ಪ ತಂದೆ ಲೇಟ್ ಚಾರೆಪ್ಪ ಬಾವಿ<br>3)ನಾಗಪ್ಪ ತಂದೆ ಲೇಟ್ ಚಾರೆಪ್ಪ ಬಾವಿ<br>4)ಚಂದ್ರಪ್ಪ ತಂದೆ ಲೇಟ್ ಚಾರೆಪ್ಪ ಬಾವಿ<br>ಉತ್ತಂಗಿ | ಕಂದಾಯ ನೀರೀಕ್ಷಕರು ಇಟಗಿ |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಉತ್ತಂಗಿ | 750/11<br>754/a<br>754/b | 2.73<br>2.84<br>1.97 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನುಗಳಿಗೆ ಸಂಬಂದಿಸಿದಂತೆ ಶ್ರೀ ನಾಗಪ್ಪ ತಂದೆ ಲೇಟ್ ಚಾರೆಪ್ಪ ಬಾವಿ ಇವರು ದಿನಾಂಕ 01/01/2015 ರಂದು ವಂಶವೃಕ್ಷ ಹಾಗು ಗುರುತಿನ ಚೀಟಿ ಲಗತ್ತಿಸಿ ಅರ್ಜಿ ಸಲ್ಲಿಸಿ ತಮ್ಮ ತಂದೆ ಬಾವಿ ಚಾರೆಪ್ಪ ಇವರು ಮರಣ ಹೊಂದಿದ್ದು ವಾರಸುದಾರರ ಹೆಸರಿನಲ್ಲಿ ಜಂಟಿ ಪೌತಿ ಪಟ್ಟಾ ಮಾಡಲು ಅರ್ಜಿ ಸಲ್ಲಿಸಿರುತ್ತಾನೆ.ಈ ಮೇರೆಗೆ ಎಂ ಆರ್ ಸಂಖ್ಯೆ ಹೆಚ್74/2014-15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಯಾರಿಂದಲು ತಕರಾರು ಬಂದಿರುವುದಿಲ್ಲ.ಆದರೆ ನಮೂನೆ 21 ನೋಟೀಸನ್ನು ಚಂದ್ರಪ್ಪ ತಂದೆ ಚಾರೆಪ್ಪ ಬಾವಿ ಇವರು ಸ್ವೀಕರಿಸಲು ನಿರಾಕರಿಸಿದ ಕಾರಣ ಕಂದಾಯ ನೀರೀಕ್ಷಕರು ಇಟಗಿ ಇವರು ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 09/07/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಅಂತಿಮಗೊಳಿಸಲಾಯಿತು. ವಿಚಾರಣೆಗೆ ವಾದಿಗಳು ಮತ್ತು ಪ್ರತಿವಾದಿಗಳು ಹಾಜರಾಗಿ ವಂಶವೃಕ್ಷದಲ್ಲಿ ನಾಲ್ಕು ಜನರ ಬದಲಾಗಿ ಕೇವಲ ಮೂರು ಜನರ ಹೆಸರನ್ನು ನಮೂದಿಸಿದ ಕಾರಣ ಚಂದ್ರಪ್ಪ ಇವರು ನಮೂನೆ 21 ನೋಟೀಸನ್ನು ಸ್ವೀಕರಿಸಲು ನಿರಾಕರಿಸಿದ್ದು ಹಾಲಿ ಚೆಕ್ ಲೀಸ್ಟ ಪ್ರಕಾರ ನಾಲ್ಕು ಜನರ ಹೆಸರಿಗೆ ಜಂಟಿ ಪೌತಿ ಪಟ್ಟಾ ಮಾಡಲು ಒಪ್ಪಿಗೆ ನೀಡಿದ ಕಾರಣ ಈ ಕೆಳಕಂಡ

## ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ಪ್ರಕರಣದಲ್ಲಿ ವಾದಿಗಳಾದ 1)ಮದುಗವ್ವ ತಂದೆ ಲೇಟ್ ಚಾರೆಪ್ಪ ಬಾವಿ 2)ಬಸಪ್ಪ ತಂದೆ ಲೇಟ್ ಚಾರೆಪ್ಪ ಬಾವಿ 3)ನಾಗಪ್ಪ ತಂದೆ ಲೇಟ್ ಚಾರೆಪ್ಪ ಬಾವಿ ಮತ್ತು 4)ಚಂದ್ರಪ್ಪ ತಂದೆ ಲೇಟ್ ಚಾರೆಪ್ಪ ಬಾವಿ ಇವರ ಹೆಸರುಗಳಲ್ಲಿ ಕೆಳಕಂಡ ದಾವಾ ಜಮೀನುಗಳನ್ನು ಜಂಟಿಯಾಗಿ ಪೌತಿ ಪಟ್ಟಾ ಮಾಡಲು ಆದೇಶಿಸಿದೆ. .

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಉತ್ತಂಗಿ | 750/11<br>754/a<br>754/b | 2.73<br>2.84<br>1.97 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹೂವಿನಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.